**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

<u>ಸಿ.ಸಿ.ನಂ. **1081 /2025**</u>

ದಿನಾಂಕಃ **09.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಸೋಮಶೇಖರ್ | ಚಾಸಾ-4, ಪ್ರಾಸ.-4 |
| ತಂದೆಯ ಹೆಸರುಃ | ಲೇಟ್ ತಿಮ್ಮಣ್ಣ | |
| ವಯಸ್ಸು ಃ | 55 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ದೋಗಿಹಳ್ಳಿ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಚಾಸಾ-1 ಮತ್ತು 5 ರವರು ನನಗೆ ಗೊತ್ತು. ಸುಮಾರು 2 ವರ್ಷಗಳ ಹಿಂದೆ ಬಸವಾಜಪ್ಪ ರವರಿಗೆ ಅಜ್ಜಂಪುರ - ಬೀರೂರು ರಸ್ತೆಯಲ್ಲಿರುವ ಹಳ್ಳಿಮೇಸ್ತ್ರು ಗೋಡೌನ್ ಬಳಿ ಕಾರು ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ. ಅಪಘಾತವಾದ ದಿನ ನಾನು ತೋಟದಲ್ಲಿದ್ದು ಚಾಸಾ-1 ರವರು ಅಪಘಾತದ ವಿಷಯ ತಿಳಿಸಿದ್ದು ನಾನು ಸ್ಥಳಕ್ಕೆ ಹೋಗಿರುತ್ತೇನೆ. ಅದೇ ದಿನ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಮಧ್ಯಾಹ್ನ 1.00 ರಿಂದ 2.00 ರವರೆಗೆ ಮಹಜರ್ ಜರುಗಿಸಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಚಾಸಾ-5 ರವರು ಹಾಜರಿದ್ದೆವು. ಪೋಲಿಸರು ಸ್ಥಳ ಮಹಜರ್ ಗೆ ಸಹಕರಿಸುವಂತೆ ನೋಟಿಸು ಜಾರಿಗೊಳಿಸಿರುತ್ತಾರೆ. ಸಾಕ್ಷಿ ಸದರಿ ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಎಂದು, ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಪೋಲಿಸರಿಗೆ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಮಹಜರ್ ಸಮಯದಲ್ಲಿ ಪೋಲಿಸರು ಛಾಯಾಚಿತ್ರ ತೆಗೆಸಿರುತ್ತಾರೆ. ಸಾಕ್ಷಿಯು ಮಹಜರ್ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-5 ರಿಂದ 8 ಎಂದು ಗುರುತಿಸಲಾಗಿದೆ. ಪೋಲಿಸರು ಸ್ಥಳದಲ್ಲಿ ಮಹಜರ್ ತಯಾರಿಸಿದ್ದು, ಸದರಿ ಮಹಜರ್ ಗೆ ನಾನು, ಚಾಸಾ-1 ಮತ್ತು 5 ರವರು ಸಹಿ ಮಾಡಿರುತ್ತೇವೆ. ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ನಂತರ ನಮ್ಮನ್ನು ಪೋಲಿಸರು ಠಾಣೆ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ ಅಪಘಾತಪಡಿಸಿದ ಕೆಎಲ್-32 ಹೆಚ್-3001 ರ ಮಹೇಂದ್ರ ಜೈಲೋ ಕಾರು ಮತ್ತು ಕೆಎ-66 8675 ರ ಟಿ ವಿ ಎಸ್ ಎಕ್ಸ್ ಎಲ್ ವಾಹನವನ್ನು ಚಾಸಾ-1 ರವರು ತೋರಿಸಿದ ಮೇರೆಗೆ ಮಧ್ಯಾಹ್ನ 2.00 ರಿಂದ 3.00 ಗಂಟೆ ಸಮಯದವರೆಗೆ ಮಹಜರ್ ಮೂಲಕ ಮುಂದಿನ ಕ್ರಮಕ್ಕಾಗಿ ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿ ಅಮಾನತ್ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಅಮಾನತ್ ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-10 ರಿಂದ 15 ರ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ ಶ್ರೀ ಎನ್ ಎಸ್  ಆರೋಪಿ ಪರ ವಕೀಲರಿಂದಃ</u>

ಚಾಸಾ-1 ರವರು ನಮ್ಮ ಊರಿನವರು.  ಅವರು ನನ್ನ ಸಂಬಂಧಿಕರಲ್ಲ.  ಮೃತ ಬಸವರಾಜ್ ನಮ್ಮ ಗ್ರಾಮಸ್ಥರು.  ಪೋಲಿಸರು ಮಹಜರ್ ಗೆ ಸಹಕರಿಸುವಂತೆ ಸ್ಥಳದಲ್ಲೇ ನೋಟಿಸು ಜಾರಿ ಗೊಳಿಸಿರುತ್ತಾರೆ. ನೋಟಿಸನ್ನು 2 ವರ್ಷಗಳ ಹಿಂದೆ ಡಿಸೆಂಬರ್ ತಿಂಗಳಲ್ಲಿ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನೀಡಿರುತ್ತಾರೆ.  ನೋಟಿಸು ನೀಡುವ ಸಮಯದಲ್ಲಿ ನಾನು, ಚಾಸಾ-1 ಮತ್ತು 5 ರವರು ಹಾಜರಿದ್ದೆವು. ಮಹಜರ್ ನಲ್ಲಿ ಏನೇನು ಬರೆದಿದೆ ನಿಮಗೆ ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೋಲಿಸರು ಮಹಜರನ್ನು ಓದಿ ಹೇಳಿದ ನಂತರ ಮಹಜರುಗಳಿಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.  ಪೋಲಿಸರು ನನ್ನ ಸಮಕ್ಷಮ ನಕ್ಷೆ ತಯಾರಿಸಿರುತ್ತಾರೆ, ಅದಕ್ಕೆ ನನ್ನ ಸಹಿ ಪಡೆದಿರುವುದಿಲ್ಲ.  ಸ್ಥಳ ಮಹಜರ್ ಸ್ಥಳದ ಪೂರ್ವಕ್ಕೆ ಃ ನಂಜುಂಡಪ್ಪ ರವರ ತೋಟ, ಪಶ್ಚಿಮಕ್ಕೆ ಃ ಹಳ್ಳಿಮೇಸ್ಟ್ರು ಗೋಡೌನ್, ಉತ್ತರಕ್ಕೆ ಃ ಅಜ್ಜಂಪುರ ರಸ್ತೆ, ದಕ್ಷಿಣಕ್ಕೆ ಃ ಬೀರೂರು ರಸ್ತೆ.  ನಾನು ಈಗ ಹೇಳಿದ ಚಕ್ಕುಬಂಧಿ ಸ್ಥಳದಲ್ಲಿ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ.  ಪಶ್ಚಿಮಕ್ಕೆ ಇರುವ  ಹಳ್ಳಿಮೇಸ್ಟ್ರು ಗೋಡೌನ್ ನ ಮಾಲೀಕರ ಹೆಸರು ಚಂದ್ರಶೇಖರ್.  ನನಗೆ ಓದಲು ಬರೆಯಲು ಬರುತ್ತದೆ.  ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲದೇ ಇದ್ದರೂ ಸಹ ಚಾಸಾ-1 ರವರು ನಮ್ಮ ಊರಿನವರಾದ ಕಾರಣ ಅವರಿಗೆ ಸಹಕರಿಸುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.  ಅಪಘಾತಕ್ಕೊಳಗಾದ ಟಿ ವಿ ಎಸ್ ವಾಹನದ ಮುಂಭಾಗ ಸಂಪೂರ್ಣ ಜಖಂ ಗೊಂಡಿರುತ್ತದೆ ಎಂದರೆ ಸರಿ.  ವಾಹನದ ಮುಂಭಾಗಕ್ಕೆ ಇನ್ನೊಂದು ವಾಹನ ಗುದ್ದಿದ್ದಲ್ಲಿ ಮಾತ್ರ ವಾಹನದ ಮುಂಭಾಗ ಜಖಂ ಗೊಳ್ಳುತ್ತದೆ ಎಂದರೆ ಸಾಕ್ಷಿ ಹಿಂಭಾಗದಿಂದ ಗುದ್ದಿರುತ್ತಾರೆ ಎಂದು ನುಡಿಯುತ್ತಾರೆ.  ನಾನು ಹೇಳಿದ ರೀತಿ ಅಪಘಾತವಾಗಿರುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ.  ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದಲ್ಲಿ ವಾಹನದ ಅಮಾನತ್ ಮಹಜರ್ ಬರೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.  ನಾನು ಘಟನಾ ಸ್ಥಳದಲ್ಲಿ ಒಂದು ಸಹಿ ಮಾಡಿರುತ್ತೇನೆ.  ನೋಟಿಸ್ ಗೆ

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
**3** ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.